ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

## (ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

ಕಂಪನಿ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು –01

ಓದಲಾಗಿದೆ:–

ಬೆವಿಕಂ ನಿರ್ದೇಶಕ ಮಂಡಳಿ ಠರಾವು ಸಂಖ್ಯೆ: 69/20 ದಿನಾಂಕ: 04.08.2015

ಪ್ರಸ್ತಾವನೆ:

ಕಂಪನಿ ಕಾರ್ಯಾಲಯದ ಲೆಕ್ಕ ನಿರ್ವಹಣೆ ಶಾಖೆಯಲ್ಲಿ ಕಾಸ್ಟ್ ಅಕೌಂಟಿಂಗ್ ರೆಕಾರ್ಡ್ ರೂಲ್ಸ್, ಆದಾಯ ತೆರಿಗೆ ನಿಯಮಗಳು, ಅಕೌಂಟಿಂಗ್ ಸ್ಟ್ಯಾಂಡರ್ಡ್‌ಗಳ ಪಾಲನೆ ಹಾಗೂ ಮೌಲ್ಯ ವರ್ಧಿತ ತೆರಿಗೆ ನಿಯಮಗಳು ಇತ್ಯಾದಿ ಪ್ರಮುಖ ವಿಷಯಗಳನ್ನು ಹಾಲಿ ಉಪ ಪ್ರಧಾನ ವ್ಯವಸ್ಥಾಪಕರು(ಸಂಕಲನ ಮತ್ತು ತೆರಿಗೆ) ರವರು ನಿರ್ವಹಿಸುತ್ತಿದ್ದು, ಉತ್ತಮ ಅನುಭವ ಹೊಂದಿರುವ ಇವರ ಸೇವೆಯನ್ನು ಕಂಪನಿಯ ಹಿತದೃಷ್ಟಿಯಿಂದ ಮುಂದುವರೆಸುವುದು ಅವಶ್ಯಕವಾಗಿರುತ್ತದೆ. ಸದರಿ ಅಧಿಕಾರಿಯು ಪದೋನ್ನತಿ ನಿರೀಕ್ಷಣೆಯಲ್ಲಿರುವುದನ್ನು ಪರಿಗಣಿಸಿ ದಿನಾಂಕ: 04.08.2015 ರಂದು ನಡೆದ ಬೆವಿಕಂ ನಿರ್ದೇಶಕರ ಮಂಡಳಿ ಸಭೆಯಲ್ಲಿ ಉಪ ಪ್ರಧಾನ ವ್ಯವಸ್ಥಾಪಕರು(ಸಂಕಲನ ಮತ್ತು ತೆರಿಗೆ) ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು(ಕಾಸ್ಟಿಂಗ್ ಮತ್ತು ತೆರಿಗೆ) ಹುದ್ದೆಗೆ ಅಧಿಕಾರಿಯು ವರ್ಗಾವಣೆ ಅಥವಾ ನಿವೃತ್ತಿ ದಿನಾಂಕದವರೆವಿಗೂ(ಯಾವುದು ಮೊದಲೊ ಅಲ್ಲಿಯವರೆವಿಗೆ) ಸೀಮಿತಗೊಳಿಸಿ ಉನ್ನತೀಕರಿಸಲು ನಿರ್ಣಯ ಕೈಗೊಳ್ಳಲಾಗಿರುತ್ತದೆ. ಸದರಿ ನಿರ್ಣಯದಂತೆ ಈ ಆದೇಶ ಹೊರಡಿಸಿದೆ.

**ಆದೇಶ ಸಂಖ್ಯೆ: ಬೆವಿಕಂ/ಬಿಸಿ31/14/2015–16/380 ದಿನಾಂಕ: 29 AUG 2015**

ಪ್ರಸ್ತಾವನೆಯಲ್ಲಿ ವಿವರಿಸಲಾದ ಸಂದರ್ಭಾನುಸಾರ, ಕಂಪನಿ ಕಾರ್ಯಾಲಯದ ಉಪ ಪ್ರಧಾನ ವ್ಯವಸ್ಥಾಪಕರು(ಸಂಕಲನ ಮತ್ತು ತೆರಿಗೆ) ಹುದ್ದೆಯನ್ನು ಪ್ರಧಾನ ವ್ಯವಸ್ಥಾಪಕರು(ಕಾಸ್ಟಿಂಗ್ ಮತ್ತು ತೆರಿಗೆ) ಹುದ್ದೆಯನ್ನಾಗಿ ಸೀಮಿತ ಅವಧಿಗೆ ಉನ್ನತೀಕರಿಸಲಾಗಿದೆ.

ಈ ಉನ್ನತೀಕರಣವು ಹಾಲಿ ಉಪ ಪ್ರಧಾನ ವ್ಯವಸ್ಥಾಪಕರು(ಸಂಕಲನ ಮತ್ತು ತೆರಿಗೆ) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಯನ್ನು ಪ್ರಧಾನ ವ್ಯವಸ್ಥಾಪಕರು(ಕಾಸ್ಟಿಂಗ್ ಮತ್ತು ತೆರಿಗೆ) ಹುದ್ದೆಯಿಂದ ವರ್ಗಾವಣೆಗೊಳಿಸಲಾಗುವವರೆವಿಗೆ ಅಥವಾ ನಿವೃತ್ತಿ ದಿನಾಂಕದವರೆವಿಗೆ (ಯಾವುದು ಮೊದಲೊ ಅಲ್ಲಿಯವರೆವಿಗೆ) ಮಾತ್ರ ಜಾರಿಯಲ್ಲಿರುತ್ತದೆ.

ಈ ಆದೇಶವು ಅಧಿಕಾರಿಯು ಉನ್ನತೀಕರಿಸಿದ ಹುದ್ದೆಗೆ ವರದಿ ಮಾಡಿಕೊಂಡ ದಿನಾಂಕದಿಂದ ಜಾರಿಗೆ ಬರುತ್ತದೆ.

ಆದೇಶದ ಮೇರೆಗೆ,

(ಎಂ.ಟಿ. ಶರಣಪ್ಪ)
ಪ್ರಭಾರ ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)
ಬೆವಿಕಂ., ಬೆಂಗಳೂರು.

ಪ್ರತಿಗಳು:–

1. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.